### ರೇಬಿಸ್ ಸೋಂಕಿನ ಪತ್ತೆ ಹೇಗೆ?

ಸಾಮಾನ್ಯವಾಗಿ ರೇಬಿಸ್ ವೈರಾಣು ಮೆದುಳನ್ನು ಆಕ್ರಮಿಸಿದರೆ ರೋಗಿ ಬದುಕುಳಿಯುವುದು ಕಷ್ಟ. ಅಪರೂಪಕ್ಕೆ ಕೆಲವರು ಬದುಕಲೂ ಬಹುದು. ರೇಬಿಸ್ ಅನ್ನು ಬೇರೆ ನರಮಂಡಲ ರೋಗದಿಂದ ಬೇರ್ಪಡಿಸಲು ಪ್ರಯೋಗಾಲಯದ ಪರೀಕ್ಷೆ ಉಪಯೋಗವಾಗಬಹುದು. ಈ ಸೋಂಕಿನ ಪತ್ತೆಗೆ ಅಗತ್ಯವಿರುವ ಪರೀಕ್ಷೆಗಳು ಆಧುನಿಕ ಪ್ರಯೋಗಾಲಯದಲ್ಲಿ ಮಾತ್ರ ಸಾಧ್ಯ.

ರೋಗಿಯ ಕಣ್ಣುಗುಡ್ಡೆಯ ಪಾರದರ್ಶಕ ಭಾಗದಿಂದ, ಮುಖ ಅಥವಾ ಗಂಟಲು ಭಾಗದ ಚರ್ಮದಿಂದ ಮತ್ತು ರೋಗಿಯ ಜೊಲ್ಲಿನಿಂದ ರೇಬಿಸ್ ನ ರೋಗಜನಕ ವಸ್ತುವನ್ನು ಕಂಡುಹಿಡಿಯಬಹುದು.

### ಚಿಕಿತ್ಸೆ ಮತ್ತು ನಿಯಂತ್ರಣ

* ರೇಬಿಸ್ ರೋಗಕ್ಕೆ ನಿರ್ದಿಷ್ಟವಾದ ಚಿಕಿತ್ಸೆ ಇಲ್ಲದಿದ್ದರೂ ಅದನ್ನು ಬರದಂತೆ ತಡೆಯಬಹುದು. ಬರದಂತೆ ತಡೆಯಲು ಉತ್ತಮ ಲಸಿಕೆ ಈಗ ಲಭ್ಯವಿದೆ.
* ನಾಯಿ ಕಚ್ಚಿದಾಗ ಆದಷ್ಟು ಬೇಗ ವೈದ್ಯರೊಂದಿಗೆ ಸಮಾಲೋಚನೆ ಮಾಡಿ ಅವರ ಸಲಹೆ ಸೂಚನೆಯಂತೆ ನಡೆದು ಕೊಳ್ಳಬೇಕು.
* ನಾಯಿ ಕಚ್ಚಿದ ಸ್ಥಳವನ್ನು ಚೆನ್ನಾಗಿ ಸೋಪು ನೀರಿನಿಂದ ತೊಳೆಯಬೇಕು.
* ಗಾಯದ ಮೇಲೆ ಸ್ಪಿರಿಟ್, ಬೆಟಾಡಿನ್ ನಂತಹ ರಾಸಾಯನಿಕ ದ್ರಾವಣವನ್ನು ಲೇಪಿಸಬೇಕು.
* ಗಾಯವನ್ನು ಹೊಲಿಯಬಾರದು ಅಥವಾ ಹೊಲಿಗೆ ಮಾಡುವುದನ್ನು ಮುಂದೂಡಬೇಕು.
* ಲಸಿಕೆಗಳು ನಾಯಿ ಕಡಿತದಿಂದ ಶರೀರದ ಒಳಗೆ ಹೋದ ವೈರಾಣುವನ್ನು ನರಗಳಲ್ಲಿ ಸ್ಥಾಪಿತವಾಗದಂತೆ ಮಾಡುತ್ತದೆ ಮತ್ತು ನರಮಂಡಲಕ್ಕೆ ಹೋಗದಂತೆ ತಡೆಯುತ್ತದೆ.
* ಹಿಂದೆ ರೇಬಿಸ್ ಅನ್ನು ನಿಯಂತ್ರಿಸಲು ಹೊಕ್ಕಳ ಸುತ್ತಲೂ 14 ಲಸಿಕೆ ಕೊಡುತ್ತಿದ್ದರು. ಆದರೆ ಈಗ ಉತ್ತಮ ಚುಚ್ಚುಮದ್ದು ಲಭ್ಯ. ಈ ಲಸಿಕೆಗಳು ಪರಿಣಾಮಕಾರಿ ಹಾಗೂ ಉತ್ತಮ ಗುಣಮಟ್ಟದಾಗಿವೆ.

ರೇಬಿಸ್ ಸೋಂಕು ಉಂಟಾದ ನಾಯಿ ಸಾಮಾನ್ಯವಾಗಿ 10 ದಿವಸಗಳಲ್ಲಿ ಸಾಯುತ್ತದೆ. ಆದರೆ ಅಪರೂಪಕ್ಕೆ ನಾಯಿ ಆರೋಗ್ಯವಂತ ರೋಗವಾಹಕವಾಗಿರಬಹುದು.

ನಾಯಿಗಳಲ್ಲಿ ರೇಬಿಸ್ ಎರಡು ವಿಧಗಳಲ್ಲಿ ಗೋಚರಿಸಬಹುದು.

* ಆವೇಶಪೂರ್ಣ/ಉದ್ರೇಕ ರೇಬಿಸ್
* ಮೂಕ/ಮೌನ ರೇಬಿಸ್

ಆವೇಶ ಪೂರ್ಣ/ಉದ್ರೇಕ ರೇಬಿಸ್ ಆಕ್ರಮಣಕಾರಿ, ರೇಗಿಸದೆ ಕಚ್ಚುವುದು, ಬಾಯಿ ತುದಿಯಲ್ಲಿ ವಿಪರೀತ ಜೊಲ್ಲು, ಉದ್ದೇಶವಿಲ್ಲದೆ ತಿರುಗಾಡುವುದು, ಸಿಕ್ಕ ಸಿಕ್ಕ ಮನುಷ್ಯ ಮತ್ತು ಪ್ರಾಣಿಗಳನ್ನು ಕಚ್ಚುವುದು. ಕೊನೆಗೆ ಪ್ರಜ್ಞಹೀನವಾಗಿ ನಾಯಿ ಸಾಯುತ್ತದೆ.

ಮೂಕ/ಮೌನ ರೇಬಿಸ್ ಲಕ್ವ ಹೊಡೆದ ಸ್ಥಿತಿ, ನಿದ್ರೆ ಮಾಡುತ್ತಾ ಸುಮಾರು 3–4 ದಿವಸಗಳಲ್ಲಿ ಸತ್ತು ಹೋಗುತ್ತದೆ.

(ಲೇಖಕರು ಶಿವಮೊಗ್ಗದ ಸುಬ್ಬಯ್ಯ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಅಧೀಕ್ಷಕರು. ವೈದ್ಯರ ಸಂಪರ್ಕ: 96635 58250)


# ಪುರುಷರಿಗೆ ಗೈನಕೋಮಾಸ್ಟಿಯಾ



ಗೈನಕೋಮಾಸ್ಟಿಯಾ ಹುಡುಗರಿಂದ ವಯಸ್ಸಾದವರಿಗೂ ಕಾಡುವ ಒಂದು ಮುಜುಗರ ಸಂಗತಿ, ಇಲ್ಲಿ ಎದೆಯ ಭಾಗ ಹೆಚ್ಚು ಉಬ್ಬಿನಂತಾಗಿರುತ್ತದೆ. ಇದು ಹುಡುಗರಲ್ಲಿ ಸಾಮಾನ್ಯವಾಗಿ 14–16 ರಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ 1 ವರ್ಷದಲ್ಲಿ ಕಡಿಮೆಯಾಗಿ ಸರಿಹೋಗುತ್ತದೆ. ಆದರೆ ಕೆಲವರಲ್ಲಿ ಇದು ಹಾಗೆಯೇ ಉಳಿಯುತ್ತದೆ ಅಥವಾ ಗಾತ್ರದಲ್ಲಿ ಹೆಚ್ಚಾಗುತ್ತದೆ. ಇದರಿಂದ ಹುಡುಗರಿಗೆ ಸರಿಯಾದ ಉಡುಪುಗಳನ್ನು ಧರಿಸುವುದಕ್ಕೆ ತೊಂದರೆಯಾಗುತ್ತದೆ, ಆಟಗಳಲ್ಲಿ ಭಾಗವಹಿಸುವುದಕ್ಕೆ ಮುಜುಗರ, ಸ್ನೇಹಿತರ ಅಥವಾ ಸಂಬಂಧಿಕರ ಜೊತೆ ಬೆರೆಯಲು ಆತಂಕ ಹಾಗೂ ಮುಜುಗರವಾಗುತ್ತದೆ. ಮಾನಸಿಕ ಖಿನ್ನತೆಯಿಂದ ವ್ಯಾಸಂಗದಲ್ಲಿ ಹಿಂದುಳಿಯುವುದು, ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳುವುದು ಸಾಮಾನ್ಯವಾಗಿರುತ್ತದೆ.

ಆಹಾರದಲ್ಲಿ ಎಣ್ಣೆ ಕಡಿಮೆ ಮಾಡುವುದು ಹಾಗೂ ವ್ಯಾಯಾಮ ಮಾಡುವುದರಿಂದ ಯಾವುದೇ ಬದಲಾವಣೆಗಳು ಇರುವುದಿಲ್ಲ. ಯಾಕೆಂದರೆ ಆ ಜಾಗದಲ್ಲಿ ಕೊಬ್ಬು ಕರಗದೆ ಇರುವುದು ಮತ್ತು ಗ್ರಂಥಿಗಳು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ ನೈಸರ್ಗಿಕ ವಿಧಾನಗಳಲ್ಲಿ ಬದಲಾವಣೆ ಸಾಧ್ಯವಿರುವುದಿಲ್ಲ.

ಲೈಪೋಸಕ್ಷನ್ ಮತ್ತು ಗ್ರಂಥಿಗಳನ್ನು ಪೂರ್ಣವಾಗಿ ತೆಗೆಯುವುದರಿಂದ ಈ ಸಮಸ್ಯೆಯಿಂದ ಜೀವನ ಪರ್ಯಂತ ಪರಿಹಾರ ಕಂಡುಕೊಳ್ಳಬಹುದು. ಇದು ಒಂದು ದಿನದ ಕಾಸ್ಮೆಟಿಕ್ ಸರ್ಜರಿಯಾಗಿದ್ದು, ಮರುದಿನದಿಂದ ದೈನಂದಿನ ಕರ್ತವ್ಯಗಳಲ್ಲಿ ಭಾಗವಹಿಸಬಹುದು. ಸರಿಯಾದ ಉಡುಪುಗಳನ್ನು ಧರಿಸಿ ಖಿನ್ನತೆಯಿಂದ ಹೊರಬರಬಹುದು.

**ಇನ್ನಿತರೆ ಸೇವೆಗಳು** : ಸ್ತನಗಳ ಗಾತ್ರ ಹೆಚ್ಚಿಸುವುದು / ಕಡಿಮೆ ಮಾಡುವುದು, ಬೊಜ್ಜುತನಕ್ಕೆ ಸರ್ಜರಿ, ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಮೂಗಿನ ವಿಕಾರತೆ ಸರಿಪಡಿಸುವುದು, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಇತ್ಯಾದಿ...

**ಡಾ : ಗಿರೀಶ್ ಎ. ಸಿ.**, MBBS, MS, MCh (Plastic Surgery)

**ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್,**

**ಕರ್ಲ್ಸ್ ಮತ್ತು ಕರ್ವ್ಸ್ ಹೇರ್‌ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ನಂ. 49, ಮೊದಲನೇ ಮಹಡಿ, ವೆಸ್ಟ್ ಆಫ್ ಕಾರ್ಡ್ ರಸ್ತೆ, 6ನೇ ಹಂತ, ಮಹಾಗಣಪತಿನಗರ, ವಾರಿಯರ್ ಬೇಕರಿ ಎದುರು, ರಾಜಾಜಿನಗರ, ಬೆಂಗಳೂರು.**

**www.curlsncurves.com**

**8088400400 9448571216**

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು

**ಎಲ್ಲಾ ಕಾಸ್ಮೆಟಿಕ್ ಸರ್ಜರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪ್ರತೀ ಸೋಮವಾರ ಮಧ್ಯಾಹ್ನ 1.30ಕ್ಕೆ ಪಬ್ಲಿಕ್ ನ್ಯೂಸ್ ಚಾನಲ್ ವೀಕ್ಷಿಸಿ**